ಅವಶ್ಯಕವಾಗಬಹುದಾದ ಅಂಥ ನಿಯಮಗಳನ್ನು ರಚಿಸಬಹುದು.

2) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಅಂಥ ನಿಯಮಗಳನ್ನು ರಚಿಸಬಹುದು, ಎಂದರೆ.–

ಎ) 5ನೇ ಪ್ರಕರಣದ ಅಡಿಯಲ್ಲಿ ನೇಮಕ ಮಾಡಿದ ಅಧೀನಾಧಿಕಾರಿಗಳ ಪದನಾಮ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು ;

ಬಿ) 12ನೇ ಪ್ರಕರಣದ ಅಡಿಯಲ್ಲಿ ಅರ್ಚಕರ ಹಾಗೂ 15ನೇ ಪ್ರಕರಣದ ಅಡಿಯಲ್ಲಿ ದೇವಸ್ಥಾನದ ನೌಕರರ ಉಪಲಬ್ಧಿಗಳು, ಕೆಲಸದ ವೇಳೆ ಮತ್ತು ಸೇವೆಯ ಷರತ್ತುಗಳು ;

ಸಿ) 14ನೇ ಪ್ರಕರಣದ ಅಡಿಯಲ್ಲಿ ದೇವಸ್ಥಾನದ ನೌಕರರ ಕ್ರಮಪಟ್ಟಿ ;

ಡಿ) 20ನೇ ಪ್ರಕರಣದ ಅಡಿಯಲ್ಲಿ ಸಲಹಾ ಸಮಿತಿಯ ವ್ಯವಹಾರಗಳ ನಿರ್ವಹಣೆ ;

XX XX XX

ಒಳಚರಂಡಿ ವ್ಯವಸ್ಥೆ

231 (272) ಶ್ರೀ ಅಮರೇಶ್ (ಮುಳಬಾಗಿಲು):– ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುಳಬಾಗಿಲು ಪಟ್ಟಣದಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿಗೆ ಸರ್ಕಾರ ನಿಗದಿಪಡಿಸಿರುವ ಅಂದಾಜು ಮೊತ್ತವೆಷ್ಟು ;

ಆ) ಕಾಮಗಾರಿ ಮುಗಿಯಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿಯೇನು?

ಶ್ರೀ ಸುರೇಶ್ ಕುಮಾರ್ ಎಸ್. (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–

ಅ) ಮುಳಬಾಗಿಲು ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ರೂ. 2115.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ

ಆ) ಪಟ್ಟಣದ ಆಂತರಿಕ ಒಳಚರಂಡಿ ಕೊಳವೆ ಮಾರ್ಗಗಳು ಮುಕ್ತಾಯದ ಹಂತದಲ್ಲಿದ್ದು, ಬಾಕಿ 1.95 ಕಿ.ಮೀ. ಉದ್ದದ ಕೊಳವೆ ಅಳವಡಿಸುವ ಮಾರ್ಗದಲ್ಲಿ ಇರುವ ಅಡಚಣೆಗಳನ್ನು ನಿವಾರಿಸಿಕೊಂಡು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ ಯೋಜನೆಯಡಿಯಲ್ಲಿ ನಿರ್ಮಿಸಬೇಕಾಗಿರುವ ವೆಟ್‌ವೆಲ್ ಮತ್ತು ಮಲಿನ ನೀರಿನ ಶುದ್ಧೀಕರಣಾಗಾರಕ್ಕೆ 12 ಎಕರೆ 28 ಗುಂಟೆ ಜಮೀನು ಬೇಕಾಗಿದ್ದು, ಸ್ಥಳೀಯ ಸಂಸ್ಥೆಯು ಜಮೀನನ್ನು ಮಂಡಳಿಗೆ ಹಸ್ತಾಂತರಿಸಿದ ನಂತರ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಮುಳುಗು ಸೇತುವೆ ನಿರ್ಮಾಣ

232 (290) ಶ್ರೀ ಅಂಗಾರ ಎಸ್ (ಸುಳ್ಯ):– ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉಪ್ಪಿನಂಗಡಿ–ಕಡಬ–ಸುಬ್ರಮಣ್ಯ ರಸ್ತೆಯಲ್ಲಿ ಹೊಸಮಠ ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿ ಮಾಡಲು ಕೆ.ಆರ್.ಡಿ.ಸಿ.ಎಲ್. ವತಿಯಿಂದ ಗ್ಯಾಮನ್ ಇಂಡಿಯಾ ಸಂಸ್ಥೆಗೆ ಗುತ್ತಿಗೆ ನೀಡಿ ಒಪ್ಪಂದ ಆಗಿ ಕಾಮಗಾರಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಈ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಹಾಗೂ ಕಾಮಗಾರಿ ನಿರ್ವಹಿಸಿದ ಇವರ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿರುತ್ತದೆ ;

ಇ) ಈ ಸೇತುವೆಯ ಕಾಮಗಾರಿ ಅನುಷ್ಠಾನಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ ಹಾಗಿದ್ದಲ್ಲಿ ಎಷ್ಟು ಸಮಯದಲ್ಲಿ ಮಾಡಲಾಗುತ್ತದೆ. ಇದಕ್ಕೆ ಕಾಲಮಿತಿಯನ್ನು ನಿಗದಿಪಡಿಸಲಾಗಿದೆಯೇ ; (ವಿವರ ಒದಗಿಸುವುದು)

ಈ) ಸದರಿ ಸಂಸ್ಥೆಯನ್ನು ಹೊರತುಪಡಿಸಿ ಈಗಾಗಲೇ ಒಪ್ಪಂದ